ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆ ಇಲಾಖೆ

**ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರ ಕಛೇರಿ (ಜಾರಿ), ದಕ್ಷಿಣ ವಲಯ, 3ನೇ ಮಹಡಿ**
**ವಾಣಿಜ್ಯ ತೆರಿಗೆ ಕಾರ್ಯಾಲಯ–2, ಬಿ–ಬ್ಲಾಕ್, ಕೋರಮಂಗಲ, ಬೆಂಗಳೂರು–560047.**

**NO.ADCOM/ENF/SZ/CTO-41/2022-23, ದಿನಾಂಕ: 18–07–2022**

## ಇಲಾಖಾ ವಶಕ್ಕೆ ಪಡೆದಿರುವ ಟೊಬ್ಯಾಕೊ ಉತ್ಪನ್ನಗಳನ್ನು ಹರಾಜು ಮಾಡಲು ಮುಚ್ಚಿದ ಲಕೋಟೆಯಲ್ಲಿ ಬಿಡ್‌ಗಳನ್ನು ಆಹ್ವಾನಿಸುವ ಬಗ್ಗೆ

ಕರ್ನಾಟಕ/ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಕಾಯ್ದೆ, 2017 ರಡಿ ದಕ್ಷಿಣ ನೈಋತ್ಯ ರೈಲ್ವೆ ಇವರು ವಾರಸುದಾರರು ಇಲ್ಲದ ಕಾರಣ ಇಲಾಖಾ ವಶಕ್ಕೆ ನೀಡಿರುವ ತಂಬಾಕು ಉತ್ಪನ್ನಗಳನ್ನು, ಮುಚ್ಚಿದ ಲಕೋಟೆ ಪದ್ಧತಿ ಅನುಸಾರ ಯಾವ ಸ್ಥಿತಿಯಲ್ಲಿದೆಯೋ ಅದೇ ರೀತಿ ಸಾರ್ವಜನಿಕ ಹರಾಜು ಮೂಲಕ, ಈ ಕೆಳಕಂಡ ಷರತ್ತಿಗೊಳಪಟ್ಟು ವಿಲೇವಾರಿ ಮಾಡಲು ಅಧಿಸೂಚನೆ ಹೊರಡಿಸಿದೆ.

1) ಆಸಕ್ತ ಬಿಡ್‌ದಾರರು ಈ ಕಛೇರಿಯ ಆವರಣದಲ್ಲಿನ ಸರಕುಗಳನ್ನು ದಿನಾಂಕ:03.10.2022 ರಂದು ಬೆಳಗ್ಗೆ 11.00 ರಿಂದ ಸಂಜೆ 5.00 ಗಂಟೆಯವರೆಗೂ ಪರಿಶೀಲಿಸಬಹುದಾಗಿರುತ್ತದೆ.
2) ಆಸಕ್ತ ಬಿಡ್‌ದಾರರು, ತಂಬಾಕು ಉತ್ಪನ್ನಗಳ ಖರೀದಿಗಾಗಿ, ಸೀಲ್ ಮಾಡಲಾದ ಕವರ್ ಗಳಲ್ಲಿ ತಮ್ಮ ಬಿಡ್‌ಗಳನ್ನು ದಿನಾಂಕ:10.10.2022ರ ಒಳಗಾಗಿ ಬೆಳಗ್ಗೆ 11.00 ರಿಂದ ಸಂಜೆ 5.00 ಗಂಟೆಯೊಳಗೆ, ಸರಕು ವಿವರಗಳನ್ನು ನಮೂದಿಸಿ ಸಲ್ಲಿಸಬಹುದಾಗಿರುತ್ತದೆ.
3) ಆಸಕ್ತ ಬಿಡ್‌ದಾರರು, ರೂ.10,000/–(ಹತ್ತು ಸಾವಿರ ರೂಪಾಯಿಗಳು ಮಾತ್ರ)ಗಳ ಠೇವಣಿ (ಇ.ಎಂ.ಡಿ) ಹಣವನ್ನು ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)–41, ದಕ್ಷಿಣ ವಲಯ ಬೆಂಗಳೂರು ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನ ಡಿಡಿ ಅನ್ನು ಖರೀದಿಸಿ 'ತಂಬಾಕು ಉತ್ಪನ್ನಗಳ ಖರೀದಿಗಾಗಿ' ಎಂದು ಸಲ್ಲಿಸತಕ್ಕದ್ದು.
4) ಬಿಡ್‌ದಾರರು ತಂಬಾಕು ಉತ್ಪನ್ನಗಳಿಗಾಗಿ ಮೂಲ ದರವನ್ನು ಪ್ಯಾಕೆಟ್ ಆಧಾರದಲ್ಲಿ ಸಲ್ಲಿಸತಕ್ಕದ್ದು.
5) ಬಿಡ್ ದರಗಳು ಚಾಲ್ತಿಯಲ್ಲಿರುವ ಮಾರುಕಟ್ಟೆ ದರದ ಆಧಾರದಲ್ಲಿರತಕ್ಕದ್ದು.
6) ಸೀಲ್ ಮಾಡಲಾದ ಬಿಡ್ ಲಕೋಟೆಗಳನ್ನು ದಿನಾಂಕ:11.10.2022 ರಂದು ಮಧ್ಯಾಹ್ನ 12.00 ಗಂಟೆಗೆ ಎಲ್ಲಾ ಬಿಡ್‌ದಾರರ ಸಮ್ಮುಖದಲ್ಲಿ ಈ ಕಛೇರಿಯಲ್ಲಿ ತೆರೆಯಲಾಗುವುದು. ಯಾವುದಾದರೂ ಬಿಡ್ ಒಪ್ಪಿಗೆಯಾದಲ್ಲಿ, ಯಶಸ್ವಿ ಬಿಡ್‌ದಾರರನ್ನು ಅದೇ ದಿನ ಘೋಷಿಸಲಾಗುವುದು.
7) ಯಶಸ್ವಿ ಬಿಡ್ ದಾರರು ಮೂಲ ದರದ ಜೊತೆಗೆ, ತಂಬಾಕು ಉತ್ಪನ್ನಗಳ ಖರೀದಿಯ ಮೇಲೆ ಶೇ.28% ಜಿ.ಎಸ್.ಟಿ.ಯನ್ನು ಮತ್ತು ಶೇ.160% ರಷ್ಟು ಸೆಸ್ ಅನ್ನು ಆರ್‌ಸಿಎಂ ಅಡಿಯಲ್ಲಿ ಪಾವತಿಸತಕ್ಕದ್ದು.
8) ಒಬ್ಬರಿಗಿಂತ ಹೆಚ್ಚಿನ ಬಿಡ್ ದಾರರು ಒಂದೇ ಮೊತ್ತದ ಗರಿಷ್ಠ ಬಿಡ್ ಅನ್ನು ಘೋಷಿಸಿದ್ದಲ್ಲಿ, ಅವರು ಅದೇ ದಿನ ಒಂದು ಗಂಟೆಯೊಳಗಾಗಿ ಸೀಲ್ ಮಾಡಿದ ಲಕೋಟೆಯಲ್ಲಿ ಮತ್ತೊಂದು ಬಿಡ್‌ಅನ್ನು ಸಲ್ಲಿಸುವುದು ಹಾಗೂ ಮೊದಲೇ ಸಲ್ಲಿಸಿದ ಬಿಡ್‌ಗಿಂತ ಕಡಿಮೆ ಮೊತ್ತ ಇರಬಾರದು.
9) ಯಶಸ್ವಿ ಬಿಡ್‌ದಾರರು ಹಣವನ್ನು ಜಿಎಸ್‌ಟಿ ಖಾತೆಗೆ ಆನ್‌ಲೈನ್ ಮುಖಾಂತರ ಪಾವತಿಸಿ, ಸರಕುಗಳನ್ನು ಏಳು ದಿನಗಳೊಳಗಾಗಿ ತೆಗೆದುಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಸಲ್ಲಿಸಲಾದ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
10) ಯಶಸ್ವಿ ಬಿಡ್‌ದಾರರು ಏಳು ದಿನಗಳೊಳಗಾಗಿ ಹಣವನ್ನು ಪಾವತಿಸಲು ವಿಫಲವಾದಲ್ಲಿ, ಎರಡನೆಯ ಬಿಡ್‌ದಾರರನ್ನು ಯಶಸ್ವಿ ಬಿಡ್‌ದಾರರೆಂದು ಪರಿಗಣಿಸಲಾಗುವುದು.

11) ಯಶಸ್ವಿ ಬಿಡ್‌ದಾರರು ಸದರಿ ಖರೀದಿಯನ್ನು ಅನೋಂದಾಯಿತ ಖರೀದಿ ಎಂದು ಪರಿಗಣಿಸತಕ್ಕದ್ದು.
12) ಯಾವುದೇ ಬಿಡ್‌ಗಳನ್ನು ಯಾವುದೇ ಕಾರಣವಿಲ್ಲದೇ ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಕೆಳಗೆ ಸಹಿಮಾಡಲಾದ ಅಧಿಕಾರಿಗಳು ಹೊಂದಿರುತ್ತಾರೆ.

Renuka G. N. 27/09/2022

ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)-41,
ದಕ್ಷಿಣ ವಲಯ, ಬೆಂಗಳೂರು

Commercial Tax Officer
(Enforcement)-41, South Zone
Bangalore

<u>ಪ್ರತಿಗಳನ್ನು:</u>

1) ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು, ಕರ್ನಾಟಕ, ಗಾಂಧಿನಗರ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2) ಮಾನ್ಯ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಲೆಕ್ಕಪರಿಶೋಧನೆ), ವಾಣಿಜ್ಯ ತೆರಿಗೆ ಆಯುಕ್ತರ ಕಛೇರಿ, ಗಾಂಧಿನಗರ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
3) ಮಾನ್ಯ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ), ದಕ್ಷಿಣವಲಯ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
4) ಮಾನ್ಯ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿಸಸೇತೆಕ-1,2,3,4,5 & 6 ರವರಿಗೆ ಮತ್ತು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾಗೃತಿ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದ್ದು, ತಮ್ಮ ವಿಭಾಗದ ನೋಟೀಸ್ ಬೋರ್ಡ್‌ನಲ್ಲಿ ಸದರಿ ಹರಾಜು ನೋಟಿಸನ್ನು ಪ್ರಕಟಿಸಲು ಕೋರಲಾಗಿದೆ.
5) ಇಲಾಖೆಯ ನೋಟೀಸ್ ಬೋರ್ಡ್ www.ctax.kar.nic.in

**ಕರ್ನಾಟಕ ಸರ್ಕಾರ**

**ವಾಣಿಜ್ಯ ತೆರಿಗೆ ಇಲಾಖೆ**

ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರ ಕಛೇರಿ(ಜಾರಿ), ದಕ್ಷಿಣ ವಲಯ, 3ನೇ ಮಹಡಿ, ವಾಣಿಜ್ಯ ತೆರಿಗೆ ಕಾರ್ಯಾಲಯ–2, ಬಿ–ಬ್ಲಾಕ್, ಕೋರಮಂಗಲ, ಬೆಂಗಳೂರು–560047

ಸಂ:ADCM/ENF/SZ/CTO-41/INS-63/2022-23, ದಿ:18.7.2022 ರಂದು ದಕ್ಷಿಣ ನೈರುತ್ಯ ರೈಲ್ವೆ, ಬೆಂಗಳೂರು ನಗರ ಇವರು ವಾರಸುದಾರರು ಇಲ್ಲದ ಕಾರಣ **ಇಲಾಖಾ ವಶಕ್ಕೆ ನೀಡಿರುವ ತಂಬಾಕು ಉತ್ಪನ್ನಗಳನ್ನು ಹರಾಜು ಮಾಡಲು ಮುಚ್ಚಿದ ಲಕೋಟೆಯಲ್ಲಿ ಬಿಡ್‌ಗಳನ್ನು ಆಹ್ವಾನಿಸುವ ಬಗ್ಗೆ.**

ಕರ್ನಾಟಕ/ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಕಾಯಿದೆ 2017ರಡಿ ಇಲಾಖಾ ವಶಕ್ಕೆ ಪಡೆದಿರುವ **ತಂಬಾಕು ಉತ್ಪನ್ನಗಳನ್ನು** ಈ ಕೆಳಕಂಡ ವಿವರಾನುಸಾರ ಮುಚ್ಚಿದ ಲಕೋಟೆ ಪದ್ಧತಿ ಅನುಸಾರ ಯಾವ ಸ್ಥಿತಿಯಲ್ಲಿದೆಯೋ ಅದೇ ರೀತಿ ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡಲು ಅಧಿಸೂಚನೆ ಹೊರಡಿಸಿದೆ.ಅದರಂತೆ ಆಸಕ್ತ ಬಿಡ್ ದಾರರು ಈ ಕಛೇರಿಯ ಆವರಣದಲ್ಲಿರುವ ಸರಕುಗಳನ್ನು ದಿನಾಂಕ: 03/10/2022 ರಂದು ಬೆಳಿಗ್ಗೆ 11.00 ರಿಂದ ಸಂಜೆ 5ಗಂಟೆಯವರೆಗೂ ಪರಿಶೀಲಿಸಬಹುದಾಗಿರುತ್ತದೆ ಮತ್ತು ಖರೀದಿಗಾಗಿ ಸೀಲ್ ಮಾಡಲಾದ ಕವರ್‌ಗಳಲ್ಲಿ ತಮ್ಮ ಬಿಡ್‌ಗಳನ್ನು ದಿನಾಂಕ:10/10/2022ರ ಒಳಗಾಗಿ ಬೆಳಿಗ್ಗೆ 11.00 ರಿಂದ ಸಂಜೆ 5.00 ಗಂಟೆಯೊಳಗೆ ಸರಕುಗಳ ವಿವರಗಳನ್ನು ನಮೂದಿಸಿ ಸಲ್ಲಿಸಬಹುದಾಗಿದೆ ಹಾಗೂ ರೂ.10,000/–(ಹತ್ತು ಸಾವಿರ ರೂಪಾಯಿಗಳು) ಠೇವಣಿ (ಇಎಂಡಿ) ಹಣವನ್ನು ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)–41, ದಕ್ಷಿಣ ವಲಯ, ಬೆಂಗಳೂರು ಇವರ ಹೆಸರಿನಲ್ಲಿ **ತಂಬಾಕು ಉತ್ಪನ್ನಗಳ** ಖರೀದಿಗಾಗಿ ಎಂದು ಸಲ್ಲಿಸತಕ್ಕದ್ದು. ಈ ಪ್ರಕ್ರಿಯೆಗೆ ಸಂಬಂಧಪಟ್ಟ ಷರತ್ತುಗಳು ಹಾಗೂ ನಿಂಬಂಧನೆಗಳು ಈ ವಿಭಾಗದ ಸೂಚನೆ ಫಲಕ ಹಾಗೂ ಇಲಾಖಾ ಜಾಲತಾಣ:www.ctax.kar.nic.in ನಲ್ಲಿ ಲಭ್ಯವಿರುತ್ತದೆ.

ಸಹಿ/–

ವಾಣಿಜ್ಯ ತೆರಿಗೆ ಅಧಿಕಾರಿ(ಜಾರಿ)–41,
ದಕ್ಷಿಣ ವಲಯ, ಬೆಂಗಳೂರು –47